ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 21, ಸ್ ೧೯೦೯.

III ನೆ ಪ್ರಕಾಶನ.

ಲೆಜಿಸ್ಲೆಟಿವ್ ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

1909ನೆ ಇಸವಿಯ 1ನೆ ನಂಬರು ರೆಗ್ಯುಲೇಷನ್.

(1909ನೆ ಇಸವಿ ಜನವರಿ 11ನೆ ತಾರೀಖಿನ ದಿವಸ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ತಮ್ಮ ಅನುಮತಿಯನ್ನು ದಯಪಾಲಿಸಿರುತ್ತಾರೆ.)

1888ನೆ ಇಸವಿಯ IVನೆ ನಂಬರು ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ಪುನಃ ತಿದ್ದುಪಾಟು ಮಾಡತಕ್ಕ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ.

ಸ್ ೧೮೮೮ನೆ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಮೈಸೂರು ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ಇದರಡಿ ಕಂಡಂತೆ ವಿಧಿಸಲು ಹುಕುಂ ದಯಪಾಲಿಸಿರುತ್ತಾರೆ.

1888ನೆ ಇಸವಿಯ IVನೆ ನಂಬರು ರೆಗ್ಯುಲೇಷನಿನಲ್ಲಿ 210 A ಎಂಬ ಹೊಸ ಪ್ರಕರಣವನ್ನು ಸೇರಿಸುವದು.

1. ಸ್ ೧೮೮೮ನೆ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 210ನೆ ಪ್ರಕರಣದ ನಂತರ ಇದರಡಿ ಕಂಡ ಪ್ರಕರಣವನ್ನು ಹೊಸದಾಗಿ ಸೇರಿಸತಕ್ಕದ್ದು :—

ರೆವಿನ್ಯೂ ಕಮಿಷನರವರಿಂದ ಅಪೀಲುಗಳನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳುವದಕ್ಕೆ ಅಧಿಕಾರ.

"210 A. ಈ ರೆಗ್ಯುಲೇಷನಿನಲ್ಲಿ ಅನ್ಯಥಾ ವಿಧಿಸಿದ್ದಾಗ್ಯೂ ಕೂಡಾ, ರೆವಿನ್ಯೂ ಕಮಿಷನರವರಲ್ಲಿ ಫೈಸಲಾಗದೆ ಬಾಕಿ ನಿಂತಿರುವ ಯಾವ ಅಪೀಲನ್ನಾಗಲಿ ಅಥವಾ ಯಾವ ತರಗತಿಗೆ ಸೇರಿದ ಅಪೀಲುಗಳನ್ನಾಗಲಿ, ಅಂಥಾ ಅಪೀಲುಗಳ ಫೈಸಲಾತಿಯ ಬಗ್ಗೆ ಎಷ್ಟುವುಟ್ಟಿಗೆ ಕ್ರಮ ಜರುಗಿದ್ದರೂ ಸರಿಯೆ, ಸರ್ಕಾರದವರು ವಾಪಸು ತರಿಸಿಕೊಂಡು ಅವುಗಳನ್ನು ಫೈಸಲ್ಮಾಡಬಹುದು, ಅಥವಾ ಅವುಗಳನ್ನು ರೆವಿನ್ಯೂ ಕಮಿಷನರವರಿಗೆ ಫೈಸಲ್ ಬಗ್ಗೆ ಪುನಹ ವರ್ಗಾಯಿಸಬಹುದು."

ವಿ. ಪಿ. ಮಾಧವರಾವ್,
ದಿವಾನರವರು.

ಉದ್ದೇಶಗಳ ಮತ್ತು ಕಾರಣಗಳ ವಿವರಣೆ.

ರೆವಿನ್ಯೂ ಕಮಿಷನರವರ ಫೈಲಿಗೆ ಸೇರಿದ ಯಾವ ಅಪೀಲನ್ನಾಗಲಿ ಅಥವಾ ಯಾವ ತರಹೆಯ ಅಪೀಲುಗಳನ್ನಾಗಲಿ ಸರ್ಕಾರದವರು ಆಗಿಂದಾಗ್ಗೆ ವಾಪಸು ತರಿಸಿಕೊಂಡು ಅವುಗಳನ್ನು ತಾವೇ ಅಂದರೆ (ಎಗ್ಜಿಕ್ಯುಟಿವ್ ಸಭೆಯ ಕಮಿಟಿಯವರೆ) ಫೈಸಲ್ಮಾಡುವದಕ್ಕಾಗಲಿ ಅಥವಾ ಅಂಥಾ ಅಪೀಲನ್ನು ಅವಶ್ಯಕಬಿದ್ದರೆ ಪುನಹ ರೆವಿನ್ಯೂ ಕಮಿಷನರವರಿಗೆ ವರ್ಗಾಯಿಸುವದಕ್ಕೂ ಸಹಾ ಸರ್ಕಾರದವರಿಗೆ ಅಧಿಕಾರ ಕೊಡಬೇಕೆಂಬುವದೇ ಈ ತಿದ್ದುಪಾಟಿನ ಉದ್ದೇಶವಾಗಿರುತ್ತೆ. ಬ್ರಿಟಿಷ್ ಇಂಡ್ಯಾದಲ್ಲಿ ಜಾರೀಲಿರುವ ಹೊಸ ಸಿವಿಲ್ ಪ್ರೊಸೀಜರ್ ಕೋಡು 24ನೆ ಪ್ರಕರಣಾನುಸಾರ ಎಲ್ಲಾ ಹೈ ಕೋರ್ಟುಗಳಿಗೂ, ಜೀಲ್ಲಾ ಕೋರ್ಟುಗಳಿಗೂ ಮತ್ತು ಡಿಸ್ಟ್ರಿಕ್ಟು ಕೋರ್ಟುಗಳಿಗೂ ಸಹಾ ಕೊಟ್ಟು ಇರುವ ಇಂಥಾ ಅಧಿಕಾರವನ್ನು ಈ ಸಂಸ್ಥಾನದ ಸಾಧಾರಣ ರೆವಿನ್ಯೂ ಬಾಬಿನ ಆಡಳಿತಗಳಿಗೂ ಅವಶ್ಯಕವಾಗಿ ಕೊಡಬೇಕಾಗಿ ಬಂದಿರುತ್ತೆ. ಅಲ್ಲದೆ ಪ್ರಕೃತದಲ್ಲಿ ರೆವಿನ್ಯೂ ಕಮಿಷನರವರಿಗೆ ವಾಡಿಕೆಯಾದ ಕೆಲಸಗಳೇ ವಿಶೇಷವಾಗಿರುವದರಿಂದ ಅವುಗಳನ್ನು ತಕ್ಕಮಟ್ಟಿಗೆ ಕಮ್ಮಿಮಾಡಿ ಕ್ಷಾಮ ಸಂಬಂಧವಾದ ಕೆಲಸಗಳು ಹೆಚ್ಚುತ್ತಾ ಇರುವುದರಿಂದ ಈ ಕೆಲಸಕ್ಕೆ ಇವರು ವಿಶೇಷ ಕಾಲವನ್ನು ಮತ್ತು ಗಮನವನ್ನು ಕೊಡಬೇಕಾಗಿರುತ್ತದೆ ಆದುದರಿಂದ ತಿದ್ದುಪಾಟನ್ನು ಮಾಡುವದು ಈಗ ಅತ್ಯವಶ್ಯಕವಾಗಿ ಇರುತ್ತೆ.

ನಂ. 208—ಲೆ ಕಾರ್ಯ—ತಾರೀಖು 12ನೆ ಜನವರಿ 1909.

ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯ ನಿರ್ವಾಹದ ಬಗ್ಗೆ ವಿಚಾರಿಸುವ ನಿಬಂಧನೆಗಳ ಪೈಕಿ 31ನೆ ನಿಬಂಧನೆಯ ಮೇರೆಗೆ, ಈ ಕೆಳಗಣ ಬಿಲ್ಲೂ ಮತ್ತು ಅದಕ್ಕೆ ಸಂಬಂಧಪಟ್ಟ ಉದ್ದೇಶ ಮತ್ತು ಕಾರಣಗಳ ವಿವರವೂ ಇವುಗಳನ್ನು ಸರ್ವ ಸ್ಥರ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸಿರುತ್ತದೆ.

1884ನೆ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯುಲೇಷನ್ನು ಪುನಃ ತಿದ್ದುಪಾಟು ಮಾಡಲು ಹುಟ್ಟಿದ ಬಿಲ್ಲು.

1884ನೆ ಇಸವಿಯ ಮೈಸೂರು ಚೀಫ್ ಕೋರ್ಟು ರೆಗ್ಯುಲೇಷನ್ನು ಪುನಃ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ಇದರಡಿ ಕಂಡಂತೆ ಹುಕುಂ ದಯಪಾಲಿಸಿರುತ್ತಾರೆ :—

3ನೆ ಪ್ರಕರಣದ ಕೊನೇ ಪ್ಯಾರಾಗೆ ಬದಲಾಗಿ ಈ ಕೆಳಗೆ ಬರುವುದನ್ನು ಸೇರಿಸಿಕೊಳ್ಳಬೇಕು :—

"ಫುಲ್‌ಬೆಂಚು" ಅಂದರೆ ಚೀಫ್ ಕೋರ್ಟಿನ ಮೂವರು ಜಡ್ಜಿಗಳಿಗೆ ಕಮ್ಮಿ ಇಲ್ಲದೆ ಇರತಕ್ಕ ಬೆಂಚು.

ಉದ್ದೇಶಗಳ ಮತ್ತು ಕಾರಣಗಳ ವಿವರ.

1908ನೆ ಇಸವಿ ನವಂಬರು 18ನೆ ತಾರೀಖಿನ ಜ್ಯು. 1408—ಕೋರ್ಟ್ಸ್ 114-08-1ನೆ ನಂಬರು ನೋಟಿಫಿಕೇಷನ್ನಲ್ಲಿ ಸಾದರವಾಗಿರುವ ಸರ್ಕಾರಿ ಹುಕುಂನಂತೆ ಚೀಫ್ ಕೋರ್ಟಿನಲ್ಲಿ ಸ್ವಲ್ಪಕಾಲದ ವರಿವಿಗೆ 4 ಜನ ಜಡ್ಜಿಗಳಿರುವರು. 1884ನೆ ಇಸವಿಯ ಮೈಸೂರು ಚೀಫ್ ಕೋರ್ಟ್ ರೆಗ್ಯುಲೇಷನ್ನ 3ನೆ ಪ್ರಕರಣದಲ್ಲಿ "ಫುಲ್‌ಬೆಂಚು" ಎಂಬುವುದು ಚೀಫ್ ಕೋರ್ಟಿನ ಜಡ್ಜಿಗಳನ್ನೆಲ್ಲಾ ಬಳಗೊಂಡಿರುವ ಬೆಂಚು ಎಂದು ನಿವರಿಸಿದೆ. ಈ ವಿವರಣೆಯನ್ನಿಟ್ಟುಕೊಂಡರೆ ಜಾರಿ ಕ್ರಮ ನಡಿಸುವಲ್ಲಿ ತೊಂದರೆಗೆ ಕಾರಣವಾಗುತ್ತದೆ; ಹ್ಯಾಗಂದರೆ 4 ಜಡ್ಜಿಗಳುಳ್ಳ ಫುಲ್‌ಬೆಂಚಿನಲ್ಲಿ ಸೇರುವ ಜಡ್ಜಿಗಳಲ್ಲಿ ಯಾವ ವಿಷಯದಲ್ಲಿಯಾಗಲಿ ಭಿನ್ನಾಭಿಪ್ರಾಯ ವುಂಟಾದರೆ ಅದನ್ನು ನಿರ್ಧರಿಸಲು ಹೆಚ್ಚು ಸಂಖ್ಯೆ (ಅಂದರೆ "ಮೆಜಾರಟಿ") ಇರದ ಹೋಗಬಹುದು.

ಇಂಡ್ಯಾ ದೇಶದ ಹೈ ಕೋರ್ಟುಗಳಲ್ಲಾದರೂ—ಫುಲ್‌ಬೆಂಚು ಅಂದರೆ ಆಯಾ ಕೋರ್ಟುಗಳ ಜಡ್ಜಿಗಳೆಲ್ಲಾ ಸೇರಬೇಕಾದ ಅವಶ್ಯಕವಿರುವದಿಲ್ಲಾ. ಕಲ್ಕತ್ತೆಯ ಫುಲ್‌ಬೆಂಚಿನಲ್ಲಿ 5 ಜನ ಜಡ್ಜಿಗಳು ಇತರ ಹೈ ಕೋರ್ಟುಗಳಲ್ಲಿ 3 ಜನ ಜಡ್ಜಿಗಳಿಗೆ ಕಮ್ಮಿ ಇಲ್ಲದಂತೆಯೂ ಇರುತ್ತಾರೆ. ಆದುದರಿಂದ ಫುಲ್ ಬೆಂಚನ್ನು 3 ಜಡ್ಜಿಗಳುಳ್ಳ ಬೆಂಚು ಎಂದು ವಿವರಿಸುವುದರಿಂದ ಸದರಿ ಪ್ರಕರಣವನ್ನು ತಿದ್ದುಪಾಟು ಮಾಡಬೇಕೆಂದು ಉದ್ದೇಶಿಸಿರುತ್ತದೆ.

1908ನೆ ಇಸವಿಯ VIನೆ ನಂಬರು ರೆಗ್ಯುಲೇಷ್ನ್.

(1908ನೆ ಇಸವಿ ಡಿಸೆಂಬರು 26ನೆ ತಾರೀಖಿನ ದಿವಸ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ಇದಕ್ಕೆ ಅನುಮತಿಯನ್ನು ದಯಪಾಲಿಸಿರುತ್ತಾರೆ).

1908ನೆ ಇಸವಿಯ 1ನೆ ನಂಬರು ಮೈಸೂರು ರಿಜಿಸ್ಟ್ರೇಷ್ನ್ ರೆಗ್ಯುಲೇಷನ್ನು ತಿದ್ದುಪಾಟು ಮಾಡಲು ಹುಟ್ಟಿದ ಬಂದು ರೆಗ್ಯುಲೇಷ್ನ್.

ಪೀಠಿಕೆ.

1903ನೆ ಇಸವಿ 1ನೆ ನಂಬರು ಮೈಸೂರು ರಿಜಿಸ್ಟ್ರೇಷ್ನ್ ರೆಗ್ಯುಲೇಷನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ, ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ಇದರಡಿ ಕಂಡಂತೆ ಕಾನೂನು ಮಾಡಲು ಅಪ್ಪಣೆ ದಯಪಾಲಿಸಿರುತ್ತಾರೆ.

ರಿಜಿಸ್ಟ್ರೇಷ್ನ್ ರೆಗ್ಯುಲೇಷನ್ನು 88ನೆ ಪ್ರಕರಣದ ತಿದ್ದುಪಾಟು.

(1) 88ನೆ ಪ್ರಕರಣದ 1ನೆ ಪ್ಯಾರಾದಲ್ಲಿ "ಪೋಸ್ಟು ಮ್ಯಾಸ್ಟರು ಜನರಲಿಗಾಗಲಿ" ಎಂಬ ಮಾತುಗಳ ನಂತರ "ಅಥವಾ ಡೆಪ್ಯೂಟಿ ಪೋಸ್ಟು ಮ್ಯಾಸ್ಟರು ಜನರಲಿಗಾಗಲಿ" ಎಂಬ ಮಾತುಗಳನ್ನು ಸೇರಿಸಿಕೊಳ್ಳಬೇಕು.

(2) ಇದೇ ಪ್ರಕರಣದ 2ನೆ ಪ್ಯಾರಾದಲ್ಲಿ "ಪೋಸ್ಟು ಮ್ಯಾಸ್ಟರು ಜನರಲಿಗಾಗಲಿ" ಎಂಬ ಮಾತುಗಳ ನಂತರ "ಅಥವಾ ಡೆಪ್ಯೂಟಿ ಪೋಸ್ಟು ಮ್ಯಾಸ್ಟರು ಜನರಲಿಗಾಗಲಿ" ಎಂಬ ಮಾತುಗಳನ್ನು ಸೇರಿಸಿಕೊಳ್ಳಬೇಕು.

ವಿ. ಪಿ. ಮಾಧವರಾವ್,
ದಿವಾನರವರು.